# ದಾಸರ ನಿಂದಿಸಬೇಡ ಮನುಜ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** Lyrics given without highlights are as per Ref. 1. The wordings in Ref. 2 are slightly different and are given in yellow highlights.
4. **Note:** Singer has followed lyrics as in Ref. 2 (given in yellow highlights)

| | |
|---|---|
| ರಾಗ: ಧನ್ಯಾಸಿ ತಾಳ: ಆದಿ | ರಾಗ: ಮಾರವಿ ತಾಳ: ಏಕ |
| ದಾಸರ ನಿಂದಿಸ ಬೇಡೆಲೊ ಪ್ರಾಣಿ, ಹರಿ | ದಾಸರ ನಿಂದಿಸಬೇಡ ಮನುಜ, ಹರಿ |
| ದಾಸರ ನಿಂದಿಸ ಬೇಡ ॥ ಪ ॥ | ದಾಸರ ನಿಂದಿಸ ಬೇಡ |
| ರಾಮನ ನಿಂದಿಸಿ ರಾವಣ ಕೆಟ್ಟ | ರಾಮರ ನಿಂದಿಸಿ ರಾವಣ ಕೆಟ್ಟ |
| ತಮ್ಮಗಾಯಿತು ಸ್ಥಿರ ಪಟ್ಟ | ವಿಭೀಷಣನಿಗಾಯಿತು ಪಟ್ಟ |
| ತಾಮಸದಿಂದಲಿ ಕೌರವ ಕೆಟ್ಟ | ಭೂಮಿಯ ಲೋಭದಿ ಕೌರವ ಕೆಟ್ಟ |
| ಧರ್ಮಗೆ ರಾಜ್ಯವ ಬಿಟ್ಟ ॥ ೧ ॥ | ಧರ್ಮಗೆ ರಾಜ್ಯವ ಬಿಟ್ಟ |
| ಮನದೊಳಗಿನ ವಿಷಯದ ವಿಷ ಬಿಟ್ಟು | ಉಡಿಯಲ್ಲಿ ಕೆಂಡವ ಕಟ್ಟಿಕೊಂಡರೆ |
| ಅನುದಿನ ಹರಿಯ ನೆನೆಯಿರಣ್ಣ | ಸುಡದಲೆ ಬಿಡುವುದೇನಣ್ಣ |
| ಸನಕಾದಿ ವಂದ್ಯನ ಪೂಜಿಸಿದರೆ ನೀವ್ | ಪೊಡವಿಯ ಜನರಿಗೆ ಬಡತನ ಬಂದರೆ |
| ಘನ ಪದವಿಯ ಕಾಣುವಿರಣ್ಣ ॥ ೨ ॥ | ಬಿಡುನುಡಿ ಆಡದಿರಣ್ಣ |
| ಕನಕದಾಸನು ಕಬ್ಬಲಿಗನು ಎಂದು | ದೇವಕಿ ಸೆರೆಯನು ಬಿಡಿಸಿದ ದಾಸರು |
| ಅಣಕಿಸಿ ನುಡಿ-ಬೇಡಣ್ಣ | ನರರೇನೈ ಈ ಜಗದೊಳು |
| ಜನರಂತೆ ನರನಲ್ಲ ತುಂಬುರನೀತನು | ಭಾವಜನಯ್ಯನ ಭಕುತರ ಸೇವಿಸೆ |
| ಜನಕಜೆ-ರಮಣನ ಪಾದ-ಸೇವಕನು ॥ ೩ ॥ | ಪಾವನ ಮಾಡುವ ಪುರಂದರ ವಿಠಲ |
| ಉಡಿಯ ಒಳಗೆ ಕಿಡಿ ಬಿದ್ದರೆ ಅದು ತಾ | |
| ಸುಡದನಕಾ ಬಿಡದಣ್ಣ | |
| ಬಡವನಾಗಿ ಕೆಡು ಬುದ್ಧಿಯ ಬಿಟ್ಟು | |
| ನಡೆಯ ಕಂಡು ಪಡಕೊಳ್ಳಣ್ಣ ॥ ೪ ॥ | |

ದೇವಕಿ ಸೆರೆಯನು ಬಿಡಿಸಿದ ದೇವನ
ಸೇವಕರು ನರರೆ ನಿಮಗವರು
ಭಾವಜನಯ್ಯನ ಪಾದವ ನೆನೆದರೆ
ಪಾವನ ಮಾಡುವ ಪುರಂದರ ವಿಠ್ಠಲ ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹರಿದಾಸರ ಮಹಿಮೆಯನ್ನು ಹೇಳಿ ಶ್ರೀ ಪುರಂದರ ದಾಸರು ಈ ಹಾಡಿನಲ್ಲಿ ಅವನ್ನು ನಿಂದಿಸದಿರುವಂತೆ ಲೋಕಕ್ಕೆ ಭೋದಿಸುತ್ತಾರೆ.

**ಗಾಢ** = ಧೃಡ

**ಕಬ್ಬಿಲಿಗ** = ಕರ್ನಾಟಕದಲ್ಲಿಯ ಒಂದು ಜಾತಿ. ಇದರಲ್ಲಿ ಅಂಬಿಗ, ಸುಣ್ಣಗಾರ, ಮೀನುಗಾರ ಜಾತಿಗಳಿವೆ.

**ತುಂಬುರು** = ಕಶ್ಯಪ - ಅರಿಷ್ಟೆಯರ ಮಗ, ದೇವ-ಗಂಧರ್ವರಲ್ಲಿ ಒಬ್ಬ. ನಾರದರ ಸಂಗಡ ಇರುವ ಬ್ರಹ್ಮನ ಸಭೆಯ ಗಾಯಕ. ಕುಬೇರನ ಶಾಪದಿಂದ ಇವನು ವಿರಾಟನೆಂಬ ರಾಕ್ಷಸನಾಗಿ ಹುಟ್ಟಿ, ಶ್ರೀ ರಾಮನಿಂದ ಮರಣ ಹೊಂದಿ ತನ್ನ ಮೂಲ ರೂಪವನ್ನು ಪಡೆದನು.

**ಜನಕಜಾ** = ಸೀತೆ

**ಪಡೆಕೊಳ್ಳಣ್ಣ** = ಜ್ಞಾನ ಪಡೆದು ಕೊಳ್ಳಣ್ಣ

**ವಿ.ಸೂ.: -** ಕನಕದಾಸರನ್ನು ಬಯ್ಯುವುದನ್ನು ಕಿವಿಯಾರೆ ಕೇಳಿ ದಾಸರು ಆ ನಿಂದಕರಿಗೆ ಆಡಿದ ಮಾತುಗಳು ಈ ಹಾಡಿನಲ್ಲಿ ಇದ್ದಂತೆ ಕಾಣುತ್ತದೆ.

**Classification:** Keerthane
**Ankita:** purandara vittala
**Location:** NA
**Category:** Bhakti, Jeevanoddhara
**Sub-Category:** prani, mosa, Krishna, bayyi, rama, ravana, Vibhishana, sita, kourava, dharma, rajya, mana, visha, puje, suttu, badava, buddi, Devaki, deva, nara, bhumi, kaadu, kanakadasa,
**Pravachana:** NA
**Explanation:** NA